## ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72ರಡಿ ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಖಾಸಗಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಖಾಸಗಿ ಆಸ್ಪತ್ರೆಯವರು ತಮ್ಮ ಆಸ್ಪತ್ರೆಗೆ ಹೆಚ್ಚು ರೋಗಿಗಳನ್ನು ದಾಖಲಿಸಿ, ಅವರಿಂದ ಹೆಚ್ಚು ಹೆಚ್ಚು ಹಣವನ್ನು ದೋಚುವ ದುರಾಸೆಗೆ ಕೈಹಾಕುವ ನಿಟ್ಟಿನಲ್ಲಿ ಸರ್ಕಾರದ **108** ಆಂಬುಲೆನ್ಸ್‌ಗಳ ವಾಹನ ಚಾಲಕರಿಗೆ ಆಮಿಷವೊಡ್ಡಿ, ರೋಗಿಯನ್ನು ಸರಕಾರಿ ಆಸ್ಪತ್ರೆ ಅಥವಾ ಮೆಡಿಕಲ್ ಕಾಲೇಜುಗಳಿಗೆ ದಾಖಲಿಸುವ ಬದಲು ಖಾಸಗಿ ಆಸ್ಪತ್ರೆಗಳಿಗೆ ಕರದೊಯ್ದು, ಒಂದು ಕೇಸಿಗೆ ಇಂತಿಷ್ಟೆಂಬಂತೆ ಮೊತ್ತವನ್ನು ನಿಗಧಿಪಡಿಸಿಕೊಂಡು ವಸೂಲು ಮಾಡಿಕೊಳ್ಳುತ್ತಿರುತ್ತಾರೆ. ಅಲ್ಲದೇ,ಈ ಆಂಬುಲೆನ್ಸ್‌ಗಳ ವಾಹನ ಚಾಲಕರಿಗೆ ಆಗಾಗ್ಗೆ ಪಾರ್ಟಿಗಳನ್ನು ಸಹಾ ಖಾಸಗಿ ಆಸ್ಪತ್ರೆಯ ಆಡಳಿತ ಮಂಡಳಿಗಳು ವ್ಯವಸ್ಥಿತಗೊಳಿಸುತ್ತಿರುತ್ತಾರೆ. ಇದರಿಂದ, ಬಡ ರೈತರು ಇಂತಹ ಖಾಸಗಿ ಆಸ್ಪತ್ರೆಗಳಿಂದ ಹೆಚ್ಚು ಆರ್ಥಿಕ ನಷ್ಟವನ್ನು ಅನುಭವಿಸುತ್ತಿರುವುದನ್ನು ತಪ್ಪಿಸಲು ಸರ್ಕಾರವು ಸೂಕ್ತ ಕಟ್ಟುನಿಟ್ಟಿನ ಕ್ರಮಗಳನ್ನು ರೂಪಿಸಿ, ಇಂತಹ ಖಾಸಗಿ ಆಸ್ಪತ್ರೆಗಳಿಗೆ ಕಡಿವಾಣ ಹಾಕುವುದು ಹಾಗೂ **108** ಆಂಬುಲೆನ್ಸ್ ಚಾಲಕರಿಗೆ ಸೂಕ್ತ ಎಚ್ಚರಿಕೆ ನೀಡುವ ಬಗ್ಗೆ,

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

********

- ರಾಜ್ಯದಲ್ಲಿ 108-ಆರೋಗ್ಯ ಕವಚ ಸೇವೆಯಡಿಯಲ್ಲಿ ಎಲ್ಲಾ ರೋಗಿಗಳನ್ನು ಹತ್ತಿರದ ಸೌಲಭ್ಯವುಳ್ಳ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲು ಸೂಚಿಸಲಾಗಿದೆ. ಒಂದು ವೇಳೆ ರೋಗಿ ಅಥವಾ ರೋಗಿಯ ಸಂಬಂಧಿಕರು ತುರ್ತು ಸಂದರ್ಭದಲ್ಲಿ ಸ್ವಇಚ್ಛೆಯಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಲು ಕೋರಿದ್ದಲ್ಲಿ ಒಪ್ಪಿಗೆಯ ಪತ್ರವನ್ನು ಪಡೆದು ನಂತರವೇ ಖಾಸಗಿ ಆಸ್ಪತ್ರೆಗೆ ದಾಖಲಿಸಲು ಕ್ರಮವಹಿಸಲಾಗುವುದು.

- ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ಸಾಲುಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗೆ ದಾಖಲಿಸಲಾದ ರೋಗಿಗಳ ಸಂಖ್ಯೆಗಳನ್ನು ಅನುಬಂಧ-01ರಲ್ಲಿ ನೀಡಲಾಗಿದೆ.

- ಕೋಲಾರ ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಖಾಸಗಿ ಆಸ್ಪತ್ರೆಗಳ ದಾಖಲಾತಿ ಪ್ರಮಾಣವು ಶೇ. 3.6% ರಷ್ಟಿದ್ದು, 2023-24 (ಜನವರಿ-2024 ನೇ ಮಾಹೆಯ ಅಂತ್ಯದವರೆಗೆ) ಶೇ. 1.7 % ರಷ್ಟಿರುತ್ತದೆ.

- ಮುಂದುವರೆದು, ಖಾಸಗಿ ಆಸ್ಪತ್ರೆಗಳಿಗೆ ರೋಗಿಗಳನ್ನು ದಾಖಲಿಸುವ ಪ್ರಕ್ರಿಯೆಗೆ ಕಡಿವಾಣ ಹಾಕಲು ಪತ್ರಸಂಖ್ಯೆ: ಡಿ.ಡಿ / ಇ.ಎಂ.ಆರ್.ಐ / ಸಾಮಾನ್ಯ / 02 / 2023-24 ದಿನಾಂಕ: 04-12-2023 ರನ್ವಯ 108-ಆರೋಗ್ಯ ಕವಚ ಆಂಬ್ಯುಲೆನ್ಸ್ ಮೂಲಕ ಸಾಗಿಸಲಾಗುವ ರೋಗಿಗಳನ್ನು ಕಡ್ಡಾಯವಾಗಿ ಹತ್ತಿರದ ಸೇವೆಯುಳ್ಳ ಸರ್ಕಾರಿ ಆಸ್ಪತ್ರೆಗೆ ಆದ್ಯತೆಯ ಮೇರೆಗೆ ಸಾಗಿಸಲು ಹಾಗೂ ಒಂದು ವೇಳೆ ಖಾಸಗಿ ಆಸ್ಪತ್ರೆಗೆ ರವಾನಿಸಬೇಕಾದಲ್ಲಿ ಕೇಂದ್ರ ಸ್ಥಾನದ ಕರೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಇ.ಆರ್.ಸಿ.ಪಿ (ವೈದ್ಯರ ಅನುಮೋದನೆ ಪಡೆದು) ಸದರಿ ಪ್ರಕರಣವನ್ನು ವಿಶ್ಲೇಷಿಸಿ ಖಾಸಗಿ ಆಸ್ಪತ್ರೆಗೆ ದಾಖಲಿಸುವ ಅವಶ್ಯಕತೆ ಇದ್ದಲ್ಲಿ ಸಕಾರಣಗಳೊಂದಿಗೆ ಅನುಮತಿಯನ್ನು ನೀಡಲು ಕ್ರಮವಹಿಸಲು ಸೇವಾದಾರರಿಗೆ ಸೂಚಿಸಲಾಗಿದ್ದು, ಒಂದು ವೇಳೆ ಅನಗತ್ಯವಾಗಿ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಬಿಡುಗಡೆ ಮಾಡಿರುವುದು ಕಂಡುಬಂದಲ್ಲಿ ಸಂಬಂಧಪಟ್ಟ ಆಡಳಿತ ವಿಭಾಗದ ಸಿಬ್ಬಂದಿಗಳುಹಾಗೂಆಂಬ್ಯುಲೆನ್ಸ್ ಸಿಬ್ಬಂದಿಗಳ ಮೇಲ ಅಗತ್ಯ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಸೂಕ್ತ ನಿರ್ದೇಶವನ್ನು ನೀಡಲಾಗಿದೆ.

- 108-ಆರೋಗ್ಯ ಕವಚ ಸೇವೆಯ ಸಿಬ್ಬಂದಿಗಳು ಒಂದು ವೇಳೆ ಅನಗತ್ಯವಾಗಿ ಖಾಸಗಿ ಆಸ್ಪತ್ರೆಗೆ ರವಾನಿಸಿರುವುದು ಕಂಡುಬಂದಲ್ಲಿ ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೇವಾದಾರರಿಗೆ ಸೂಚಿಸಲಾಗಿದೆ.

ಆಕುಕ 6 ಎಸ್‌ಬಿವಿ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**ಅನುಬಂಧ-02**

| **ಕೋಲಾರ ಜಿಲ್ಲೆ** | **ಆರ್ಥಿಕ ವರ್ಷ 2021-22** | | **ಆರ್ಥಿಕ ವರ್ಷ 2022-23** | | **ಆರ್ಥಿಕ ವರ್ಷ 2023-24** | |
|---|---|---|---|---|---|---|
| ಆಸ್ಪತ್ರೆ ದಾಖಲಾತಿ | ಪ್ರಕರಣ | % | ಪ್ರಕರಣ | % | ಪ್ರಕರಣ | % |
| ಸರ್ಕಾರ ಆಸ್ಪತ್ರೆ | 14266 | 80.7% | 14138 | 84.9% | 13449 | 86.9% |
| ಖಾಸಗಿ ಆಸ್ಪತ್ರೆ | 631 | 3.6% | 450 | 2.7% | 268 | 1.7% |
| ಇತರೆ (ಪ್ರಥಮ ಚಿಕಿತ್ಸೆ / ನಿರಾಕರಿಸಿದ, ಇತ್ಯಾದಿ) | 2777 | 15.7% | 2071 | 12.4% | 1767 | 11.4% |
| ಒಟ್ಟು | 17674 | 100.0% | 16659 | 100.0% | 15484 | 100.0% |

ಉಪ ನಿರ್ದೇಶಕರು
ತುರ್ತು ವೈದ್ಯಕೀಯ ಸೇವೆಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು